ರಾಜ್ಯದ ವಿದ್ಯುತ್ ಯೋಜನೆಗಳನ್ನು ಕಾರ್ಯಗತಗೊಳಿಸುವುದು

2508 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಐದು (5) ವರ್ಷಗಳಲ್ಲಿ ರಾಜ್ಯದ ಎಷ್ಟು ವಿದ್ಯುತ್ ಯೋಜನೆಗಳನ್ನು ಕೇಂದ್ರ ಸರ್ಕಾರದ ಒಪ್ಪಿಗೆಗಾಗಿ ಕಳುಹಿಸಿ ಕೊಡಲಾಗಿದೆ (ವರ್ಷವಾರು ಅಂಕಿಅಂಶಗಳನ್ನು ಒದಗಿಸುವುದು)

ಆ) ಇವುಗಳ ಪೈಕಿ ಎಷ್ಟು ಯೋಜನೆಗಳಿಗೆ ಕೇಂದ್ರದ ಒಪ್ಪಿಗೆ ದೊರೆತಿದೆ. ಇನ್ನೂ ಎಷ್ಟು ಯೋಜನೆಗಳಿಗೆ ಒಪ್ಪಿಗೆ ದೊರೆಯಬೇಕಾಗಿದೆ.

ಇ) ಒಪ್ಪಿಗೆ ಪಡೆದುಕೊಳ್ಳುವ ಸಲುವಾಗಿ ರಾಜ್ಯ ಸರ್ಕಾರ ಕೇಂದ್ರದ ಮೇಲೆ ಒತ್ತಡವನ್ನು ತಂದಿದೆಯೇ (ಈ ಬಗ್ಗೆ ಪೂರ್ಣ ವಿವರಗಳನ್ನು ಒದಗಿಸುವುದು)

ಈ) ಈ ಜಲ ವಿದ್ಯುತ್ ಯೋಜನೆಗಳು ಕಾರ್ಯಗತಗೊಂಡಾಗ ಎಷ್ಟು ಸಾಮರ್ಥ್ಯದ ವಿದ್ಯುತ್ ಉತ್ಪಾದನೆಯಾಗುವುದು?

ಉ) ಈ ಯೋಜನೆಗಳನ್ನು ಕಾರ್ಯಗತಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೀಲ್ (ಉಪ ಮುಖ್ಯಮಂತ್ರಿಗಳು) :

ಅ) ಕಳೆದ ಐದು ವರ್ಷಗಳಲ್ಲಿ ಈ ಕೆಳಗೆ ಕಾಣಿಸಿರುವ ಆರು ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ.

1. ಜಲವಿದ್ಯುತ್ : ಮಹದಾಯಿ ಜಲವಿದ್ಯುತ್ ಯೋಜನೆ ಆಗಸ್ಟ್ 1991ರಲ್ಲಿ ಕಳುಹಿಸಲಾಗಿದೆ.
2. ಅಣು ವಿದ್ಯುತ್ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ ಯೂನಿಟ್ 5 ಮತ್ತು 6 ನವಿಕರಿಸಿದ ಪ್ರಸ್ತಾವನೆ 1994ರಲ್ಲಿ ಕಳುಹಿಸಿದೆ.
3. ಬಾಮಾಲಾಪುರ ವಿದ್ಯುತ್ ಯೋಜನಾ ಕೇಂದ್ರ ನವೆಂಬರ್ 1991ರಲ್ಲಿ ಕಳುಹಿಸಿದೆ.
4. ಹೊಸಪೇಟೆ ಶಾಖೋತ್ಪನ್ನ ವಿದ್ಯುತ್ ಕೇಂದ್ರ ಡಿಸೆಂಬರ್ 91ರಲ್ಲಿ ಕಳುಹಿಸಿದೆ.
5. ಮಂಗಳೂರಿನಲ್ಲಿರುವ ಕೊಜೆಂಟ್ರಿಕ್ಸ್ ಕಂಪನಿ ಮಾರ್ಚ್ 95ರಲ್ಲಿ ಕಳುಹಿಸಿದೆ.
6. ಡೀಸೆಲ್ : ಯಲಹಂಕ ಡೀಸೆಲ್ ವಿದ್ಯುತ್ ಉತ್ಪಾದನಾ ಘಟಕ : ಅಕ್ಟೋಬರ್ 95ರಲ್ಲಿ ವಿಸ್ತರಣೆಗೊಳಿಸುವ ಕಾರ್ಯಕ್ರಮ.

ಆ) ಮೇಲಿನ ಎಲ್ಲಾ ಯೋಜನೆಗಳಿಗೆ ಕೇಂದ್ರ ಸರ್ಕಾರದ ಅನುಮತಿಗಾಗಿ ಕಾಯಲಾಗಿದೆ.

ಇ) ಹೌದು. ಮಹದಾಯಿ ನದಿಯು ಎರಡು ರಾಜ್ಯಗಳ ನದಿಯಾಗಿದ್ದು, ಕೇಂದ್ರ ಸರ್ಕಾರದ ಸೂಚನೆಯಂತೆ, ಗೋವಾ ಸರ್ಕಾರದ ಅನುಮತಿಯನ್ನು ಕೋರಲಾಗಿದೆ. ಸದರಿ ಯೋಜನೆಯನ್ನು ಕಾರ್ಯಗತಗೊಳಿಸಲು ಗೋವಾ ಮತ್ತು ಕರ್ನಾಟಕದ ಅಧಿಕಾರಿಗಳನ್ನೊಳಗೊಂಡ ತಾಂತ್ರಿಕ ಸಮಿತಿಯನ್ನು ರಚಿಸಲಾಗಿದೆ.

ಈ ಸಮಿತಿಯು 3 ಬಾರಿ ಸಭೆ ಸೇರಿ, ಸಭೆಯ ನಡವಳಿಯಂತೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶಾಖೋತ್ಪನ್ನ ಸ್ಥಾವರ ಯೋಜನೆಗೆ ಅನುಮತಿ ಪಡೆಯಬೇಕಾಗಿದೆ.

ಕೇಂದ್ರ ಪರಿಸರ ಇಲಾಖೆ ಮತ್ತು ರಾಜ್ಯ ವಾಯು ಮಾಲಿನ್ಯ ಕೇಂದ್ರಿಯ ಮಂಡಳಿಯ ಒಪ್ಪಿಗೆಯು ದೊರೆತ ನಂತರ ಯಲಹಂಕ ಡೀಸೆಲ್ ಉತ್ಪಾದನಾ ಘಟಕದ ವಿಸ್ತಾರಣಾ ಯೋಜನೆಯು ಕಾರ್ಯಗತವಾಗಲಿದೆ. ಒಪ್ಪಿಗೆ ಪಡೆಯುವುದಕ್ಕಾಗಿ ಪ್ರಯತ್ನಿಸಲಾಗುತ್ತಿದೆ.

ಊ) ಸುಮಾರು 828 ಮಿಲಿಯನ್ ಯೂನಿಟ್‌ಗಳು.

ಋ) ಗೋವಾ ಮತ್ತು ಕರ್ನಾಟಕ ಅಧಿಕಾರಿಗಳ ತಾಂತ್ರಿಕ ಸಮಿತಿಯ ನಿರ್ಧಾರದಂತೆ ಗೋವಾದ ಜೀವಿ ಶಾಸ್ತ್ರದ ಮೇಲೆ ಮಹಾದಾಯಿ ಯೋಜನೆಯಿಂದ ಆಗುವ ಪ್ರಭಾವದ ಬಗ್ಗೆ ಪರಿಸರ ಪ್ರಭಾವಿ ಅಧ್ಯಯನ ಕಾರ್ಯಕ್ರಮವನ್ನು ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರ ಯೋಜನೆಯ ಯೂನಿಟ್ 5 ಮತ್ತು 6ನ್ನು ಕೂಡಲೇ ಕಾರ್ಯಗತಗೊಳಿಸಲು ಸರ್ಕಾರ ಒಪ್ಪಿದೆ. ಇದನ್ನು ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಲಾಗುತ್ತಿದೆ.

ಯಲಹಂಕ ಡೀಸೆಲ್ ಉತ್ಪಾದನಾ ಘಟಕದ ವಿಸ್ತರಣೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಒಪ್ಪಿಗೆ ದೊರೆಯಬೇಕಾಗಿದೆ.

ಕೊಜೆಂಟ್ರಿಕ್ಸ್ ಕಂಪನಿಗೆ ಸಂಬಂಧಿಸಿದಂತೆ, ವಿದ್ಯುತ್ ಖರೀದಿ ಒಪ್ಪಂದಕ್ಕೆ ದಿನಾಂಕ : 30-9-1994ರಂದು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಸಹಿ ಹಾಕಿದೆ. ಮತ್ತು ವಿದ್ಯುತ್ ಖರೀದಿ ಒಪ್ಪಂದದ ಬಗ್ಗೆ ಅಂತಿಮವಾಗಿ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ.

ಹೊಸಪೇಟೆ ಯೋಜನೆಯು ಹೆಚ್.ಓ.ಕೆ. (ಡೆಕ್ಕನ್ ಪವರ್ ಕಾರ್ಪೊರೇಷನ್) ಯಿಂದ ಕಾರ್ಯಗತಗೊಳಿಸಬೇಕಾಗಿದೆ. ಸದರಿ ಯೋಜನೆಗೆ ಕೇಂದ್ರ ಸರ್ಕಾರದ ಒಪ್ಪಿಗೆಗೆ ಪ್ರಯತ್ನಿಸಲಾಗುತ್ತಿದೆ.

ಚಾಮಾಲಾಪುರ ವಿದ್ಯುತ್ ಯೋಜನೆಗೆ ಸಂಬಂಧಿಸಿದಂತೆ ಈ ಯೋಜನೆಯನ್ನು ಕಾರ್ಯಗತಗೊಳಿಸುವ ಬಗ್ಗೆ ರಾಜ್ಯ ಸರ್ಕಾರವು ಇನ್ನೂ ನಿರ್ಧರಿಸಿರುವುದಿಲ್ಲ.

ಬೀದರ್ ಜಿಲ್ಲೆಯಲ್ಲಿ ಲೋಕೋಪಯೋಗಿ ರಸ್ತೆಗಳ ದುರಸ್ತಿ

2507-ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಎಷ್ಟು ಕಿ.ಮೀ. ರಸ್ತೆಗಳು ಲೋಕೋಪಯೋಗಿ ಇಲಾಖೆಗೆ ಸೇರಿವೆ?

ಆ) ಇವುಗಳಲ್ಲಿ ರಾಜ್ಯ ಹೆದ್ದಾರಿಗೆ ಎಷ್ಟು ಕಿ.ಮೀ. ಬರುತ್ತದೆ.?

ಇ) ರಾಷ್ಟ್ರೀಯ ಹೆದ್ದಾರಿಗೆ ಎಷ್ಟು ಕಿಮೀ. ರಸ್ತೆ ಬರುತ್ತದೆ?

ಈ) ಜಿಲ್ಲೆಯಲ್ಲಿ ಇಲಾಖೆಯ ವಶದಲ್ಲಿರುವ ಅನೇಕ ರಸ್ತೆಗಳು ಹಾಳಾಗಿ ಜನ ಸಂಚಾರ ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗಿರುವುದು ನಿಜವಲ್ಲವೇ?

ಉ) ಹಾಗಿದ್ದಲ್ಲಿ ಈ ರಸ್ತೆಗಳ ಸುಧಾರಣೆ ಮತ್ತು ದುರಸ್ತಿಗಾಗಿ ಈ ಆಯವ್ಯಯದಲ್ಲಿ ಎಷ್ಟು ಹಣವನ್ನು ಮೀಸಲಿಡಲಾಗಿದೆ?

ಊ) ಇದುವರೆವಿಗೆ ಬಿಡುಗಡೆ ಮತ್ತು ಖರ್ಚು ಮಾಡಲಾದ ಹಣದ ಪ್ರಮಾಣವೆಷ್ಟು?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :